ಸಾಕ್ಷಿದಾರರನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 07.09.2023

**ಮುಂದುವರಿದ ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ ಪಿ. ಸಿ. ಎಸ್. ವಕೀಲರಿಂದಃ**

1) ನಮ್ಮ ಜಮೀನಿನ ಚೆಕ್ಕು ಬಂದಿ ನನಗೆ ಹೇಳಲು ಬರುವುದಿಲ್ಲ. ಮದಾರಬಿ ಇವರು ನನ್ನ ಸಹೋದರಿಯಾಗಬೇಕು. ಸದರಿಯವರ ಜಮೀನು ಚೆಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ. 1 ರಿಂದ 3 ನೇ ಪ್ರತಿವಾದಿಯರ ಜಮೀನಿನ ಚೆಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ. 4 ನೇ ಪ್ರತಿವಾದಿಯ ಚೆಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ. ಈ ದಾವೆಯಲ್ಲಿ ಬರೆದ ಸಂಗತಿ ನನಗೆ ಗೊತ್ತಿಲ್ಲ. 1 ರಿಂದ 3 ನೇ ಪ್ರತಿವಾದಿಯರ ಹಾಜರುಪಡಿಸಿದ ತಕರಾರುಗಳ ನೋಡಿ ತಿಳಿದುಕೊಂಡಿರುವುದಿಲ್ಲ. ಈ ದಾವೆಯನ್ನು ದಾಖಲು ಮಾಡಲು ನಾನೇ ಮಾಹಿತಿಯನ್ನು ನೀಡಿರುತ್ತೇನೆ. ಈ ದಾವೆಯನ್ನು ದಾಖಲಿಸುವ ಸಮಯದಲ್ಲಿ ಕೆಡಟಿ ಉತಾರ, ಗ್ರಾಮ ನಕಾಶೆ ತೆಗೆದು ನೋಡಿರುವುದಿಲ್ಲ. ನಾನು ನಮ್ಮ ಹಿರಿಯರು ಖರೀದಿ ಮಾಡಿದ ಖರೀದಿ ಪತ್ರದ ಅಂಶಗಳನ್ನು ಓದಿ ತಿಳಿದುಕೊಂಡಿರುವುದಿಲ್ಲ.

2) ಪ್ರತಿವಾದಿಯರ ಪಡೆದುಕೊಂಡ ಖರೀದಿ ಪತ್ರದಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ನಮ್ಮ ದೊಡ್ಡಪ್ಪ ಇಮಾಮಸಾಬ ಮತ್ತು ನಮ್ಮ ತಂದೆಯವರು 1998 ರಲ್ಲಿ ಒಪ್ಪಂದ ಪತ್ರ ಮಾಡಿಕೊಂಡಿದ್ದರು ಎಂದು ನನ್ನ ದಾವೆಯಲ್ಲಿ ಬರೆಯಿಸಿದ್ದು, ಆದರೆ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ನಿಪಿ-12 ರಲ್ಲಿ ಪ್ರತಿವಾದಿಯರ ಜಮೀನಿನಿಂದ ನನ್ನ ಜಮೀನಿಗೆ ಹಾದು ಹೋಗಲು ಹಾದಿ ಇದ್ದ ಬಗ್ಗೆ ತೋರಿಸಿದ್ದಾರೆ ಅಥವಾ ಇಲ್ಲ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ಹಾಜರುಪಡಿಸಿದ ನಿಪಿ-12 ರಲ್ಲಿ ಯಾವುದೇ ದಾರಿ ಕಾಣಿಸಿಲ್ಲ ಎಂದರೆ ಸರಿಯಲ್ಲ.

3) ನಿಪಿ-31 ಕ್ಕೆ ತಹಶೀಲ್ದಾರವರು ಇವತ್ತಿನವರೆಗೆ ಯಾವುದೇ ಉತ್ತರ ನೀಡಿರುವುದಿಲ್ಲ. ನಾನು 2004 ರಲ್ಲಿ ನಿಪಿ-31 ನ್ನು ಸಲ್ಲಿಸಿದ್ದು, ಆದರೆ 2018 ರಲ್ಲಿ ದಾವೆ ದಾಖಲಿಸಿದ್ದು, ಇದಕ್ಕೆ ಕಾರಣ ನನಗೆ ಗೊತ್ತಿಲ್ಲ. ನಾನು ದಿಃ 25.05.1998 ರಂದು ಒಪ್ಪಂದ ಪತ್ರ ಆದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿರುತ್ತೇನೆ. ನಾನು ಹಾಜರುಪಡಿಸಿದ ದಾಖಲೆಯಲ್ಲಿ ಅದು ಇಲ್ಲ ಎಂದರೆ ಸರಿಯಲ್ಲ.

4) ನಾನು ಹೇಳಿದ ಒಪ್ಪಂದ ಪತ್ರಕ್ಕೆ ಪ್ರತಿವಾದಿಯರು ಮತ್ತು 4 ನೇ ಪ್ರತಿವಾದಿಯ ಸಹೋದರ ಪಕ್ಷಗಾರರಾಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಒಪ್ಪಂದ ಪತ್ರ ಯಾರ ಯಾರ ಮಧ್ಯೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸಸದರಿ ಒಪ್ಪಂದ ಪತ್ರ ದಾವೆ ದಾಖಲು ಮಾಡುವ ಕಾಲಕ್ಕೆ ಯಾಕೆ ಹಾಜರುಪಡಿಸಲಿಲ್ಲ ಎಂದು ಹೇಳಲು ಆಗುವುದಿಲ್ಲ. ಸದರಿ ದಾಖಲೆ ದಾವಾ ದಾಖಲು ಮಾಡುವ ಸಮಯದಲ್ಲಿ ನಮ್ಮ ಬಳಿ ಇತ್ತು. ಸದರಿ ದಾಖಲೆ ಎಷ್ಟು ಛಾಪಾ ಕಾಗದದ ಮೇಲೆ ಇದೆ ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ದಾಖಲೆ ಆದ ಸಮಯದಲ್ಲಿ 4 ನೇ ಪ್ರತಿವಾದಿ ಮತ್ತು

ಆತನ ಸಹೋದರ ಆಸ್ತಿ ಮಾರಾಟ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಒಪ್ಪಂದ ಪತ್ರ ಆದ ಎಷ್ಟು ವರ್ಷಕ್ಕೆ ಜಮೀನು ಮಾರಾಟವಾಗಿದೆ ಎಂದು ನನಗೆ ಗೊತ್ತಿಲ್ಲ.

5) 1998 ರಲ್ಲಿ ಒಪ್ಪಿಗೆ ಪತ್ರ ಆಗಿತ್ತು ಎಂದು ಆಧರಿಸುವುದು ಇತ್ತೀಚೆಗೆ ಖೋಟ್ಟಿ ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸದರಿ ಒಪ್ಪಿಗೆ ಪತ್ರ ಯಾರು ಬರೆದಿರುತ್ತಾರೆ ಮತ್ತು ಪಕ್ಷಗಾರರಾಗಿ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ದಾಖಲೆಗೆ ಸಾಕ್ಷಿದಾರರಾಗಿ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ದಾಖಲೆಗೆ ಎಷ್ಟು ಜನ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

6) ಇತ್ತೀಚೆಗೆ ಪ್ರತಿವಾದಿಯರು ತಮ್ಮ ಜಮೀನನ್ನುಅಳತೆ ಮಾಡಿಸಿ ಹದ್ದು ಬಸ್ತು ಮಾಡಿಕೊಂಡಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಅವರ ಜಮೀನು ನಮ್ಮ ಕಡೆ ಬಂದಿರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ.

ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ಸಹಿ/–
ದಿವಾಣಿ ನ್ಯಾಯಾಧೀಶರು,
ಬ್ಯಾಡಗಿ.